ಅಸಲು ದಾವೆ ನಂ.ಃ115/2014
ಪಿಡಬ್ಲ್ಯೂ - 1

ದಿನಾಂಕ 17-09-2019 ರಂದು ಪುನಃ ಸಾಕ್ಷಿಗೆ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಪಾಟೀ ಸವಾಲುಃ 5 ಮತ್ತು 10 ನೇ ಪ್ರತಿವಾದಿಯರ ಪರ ಶ್ರೀ ಜೆ.ವಿ.ಹೆಚ್ ವಕೀಲರಿಂದ.**

ನನ್ನ ತಂದೆ 1992 ನೇ ಇಸವಿಯಲ್ಲಿ ತೀರಿಕೊಂಡಿದ್ದಾರೆ. ನನ್ನ ತಂದೆ ಜೀವಂತವಿದ್ದಾಗ ಅವರ ಹೆಸರಿನಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿ. ನನ್ನ ತಂದೆ ಜೀವಂತವಿದ್ದಾಗ

ದಾವಾ ಆಸ್ತಿಗಳು ಅವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿ. 5 ನೇ ಪ್ರತಿವಾದಿಗೆ ಶಹಾಬಾದನ ಒಬ್ಬ ವರನೊಂದಿಗೆ ಮದುವೆ ಮಾಡಿಕೊಡಲಾಗಿದೆ. 5 ನೇ ಪ್ರತಿವಾದಿಯ ಗಂಡ 2002 ನೇ ಇಸವಿಯಲ್ಲಿ ತೀರಿಕೊಂಡಿದ್ದಾನೆ. 5 ನೇ ಪ್ರತಿವಾದಿಗೆ ಶಹಾಬಾದ ಪಟ್ಟಣದಲ್ಲಿ ತನ್ನ ಗಂಡನಿಂದ ಬಂದ ಯಾವುದೇ ಆಸ್ತಿ ಇಲ್ಲ. ಈಗ 5 ನೇ ಪ್ರತಿವಾದಿ ನನ್ನ ತಂದೆ-ತಾಯಿ ಮೊದಲು ವಾಸಿಸುತ್ತಿದ್ದ ಜೇವರ್ಗಿ (ಕೆ) ದಲ್ಲಿದ್ದ ಮನೆಯಲ್ಲಿ ವಾಸ ಮಾಡುತ್ತಿದ್ದಾಳೆ. ಆ ಮನೆಯು ನನ್ನ ತಾಯಿ ಫಾತಿಮಾ ಇವರ ಹೆಸರಿನಲ್ಲಿದೆ. ನನ್ನ ಮತ್ತು ನನ್ನ ಸಹೋದರರ ಮಧ್ಯೆ ಜಗಳವಾಗಿ ವೈಮನಸ್ಸು ಉಂಟಾಗಿದೆ ಎಂದರೆ ಸರಿ. ಇಂದಿಗೆ 15 ವರ್ಷಗಳಿಂದ ನನ್ನ ಮತ್ತು ನನ್ನ ಸಹೋದರರ ಮಧ್ಯೆ ಸಂಬಂಧ ಹಳಸಿಹೋಗಿದೆ. ಸಂಬಂಧ ಸರಿ ಕಾರಣದಿಂದ ನನ್ನ ಮತ್ತು ನಮ್ಮ ಸಹೋದರರ ಮಧ್ಯೆ ಈ ನ್ಯಾಯಾಲಯದಲ್ಲಿ ಮತ್ತು ಹಿರಿಯ ಸಿವಿಲ್ ನ್ಯಾಯಾಲಯ ಜೇವರ್ಗಿ ದಲ್ಲಿ ಸಾಕಷ್ಟು ಸಿವಿಲ್ ವ್ಯಾಜ್ಯಗಳು ನಡೆದಿದ್ದವು ಎಂದರೆ ಸರಿ. ಐದಾರು ವರ್ಷಗಳ ಹಿಂದಿನಿಂದ ನಾನು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇನೆ. ನಾನು ನನ್ನ ಹೆಂಡತಿ ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇನೆ.

ಮದುವೆಯಾದ ನಂತರ 5 ನೇ ಪ್ರತಿವಾದಿ ತನ್ನ ಗಂಡನೊಂದಿಗೆ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿ ಅಲ್ಲ. 5 ನೇ ಪ್ರತಿವಾದಿ ತನ್ನ ಗಂಡನಿಗೆ ಸೇರಿದ ಆಸ್ತಿಯನ್ನು ಮಾರಾಟ ಮಾಡಿ ದಾವಾ ಅನುಕ್ರಮಾಂಕ 3, 4, 5 ಮತ್ತು 6 ನೇ ಆಸ್ತಿಗಳನ್ನು ಖರೀದಿ ಮಾಡಿದ್ದಾಳೆ ಎಂದರೆ ಸರಿ ಅಲ್ಲ. ದಾವಾ ಅನುಕ್ರಮಾಂಕದ 3 ನೇ ಆಸ್ತಿಯು ತನ್ನ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ತನ್ನ ಕಾನೂನು ಬದ್ಧ ಅವಶ್ಯಕತೆಗಾಗಿ 5 ನೇ ಪ್ರತಿವಾದಿಯು 10 ನೇ ಪ್ರತಿವಾದಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ ಅಲ್ಲ. 5 ನೇ ಪ್ರತಿವಾದಿಯು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿಯ ಮೇಲೆ ನನಗಾಗಲೀ ಅಥವಾ ವಾದಿಯರು ಹಾಗೂ ಇತರ ಪ್ರತಿವಾದಿಯರಿಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿ ಅಲ್ಲ.

1, 2 ಮತ್ತು 4 ನೇ ಪ್ರತಿವಾದಿಯರು ಹಾಗೂ ನಾನು ಕೂಡಿ ಒಂದು ಖೊಟ್ಟಿ Memorandum of Gift Deed ತಯಾರು ಮಾಡಿ 8 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾದ 1 ನೇ ಅನುಕ್ರಮಾಂಕದ ಆಸ್ತಿಯನ್ನು ವರ್ಗಾವಣೆ ಮಾಡಿಸಿದ್ದೇವೆ ಎಂದರೆ ಸರಿ.

ದಾವಾ ಆಸ್ತಿಗಳು ನಮ್ಮ ತಂದೆಯಿಂದ ಬಂದ ಆಸ್ತಿಗಳಾಗಿಲ್ಲದೇ ಇರುವುದರಿಂದ ದಾವಾ ಆಸ್ತಿಗಳು ನಮ್ಮ ಮತ್ತು 1 ರಿಂದ 9 ನೇ ಪ್ರತಿವಾದಿಯರ Matruka ಆಸ್ತಿಗಳಾಗಿಲ್ಲ

ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು ನಾನು ಮತ್ತು ನಮ್ಮ ಸಹೋದರರು ದಾವಾ ಆಸ್ತಿಗಳನ್ನು ಒಟ್ಟಾಗಿ ಗಳಿಸಿದ್ದೇವೆ ಎನ್ನುತ್ತಾರೆ. ನಾನು ಮತ್ತು ನನ್ನ ಸಹೋದರರು ದಾವಾ ಆಸ್ತಿಗಳನ್ನು ಒಟ್ಟಾಗಿ ಗಳಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ದಾವೆ ಸಲ್ಲಿಸುವುದಕ್ಕಿಂತ ಮೊದಲು ಮೊದಲು ಮತ್ತು ದಾವೆ ಸಲ್ಲಿಸಿದ ನಂತರ ನನಗೆ ತಿಂಗಳಿಗೆ ಇಂತಿಷ್ಟು ರೂಪಾಯಿ ಆದಾಯವಿತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ.

ನನಗೆ ಮತ್ತು ನನ್ನ ಸಹೋದರರಿಗೆ ನಮ್ಮದೇ ಆದ ಯಾವುದೇ ಆಸ್ತಿ ಮತ್ತು ಆಸ್ತಿಯ ಉತ್ಪತ್ನ ಇಲ್ಲದೇ ಇರುವುದರಿಂದ ನಾವು ದಾವಾ ಆಸ್ತಿಗಳನ್ನು ಖರೀದಿ ಮಾಡಿಲ್ಲ ಎಂದರೆ ಸರಿ ಅಲ್ಲ. ನನಗೆ ಮತ್ತು ನನ್ನ ಸಹೋದರರಿಗೆ ದಾವಾ ಆಸ್ತಿಗಳನ್ನು ಖರೀದಿ ಮಾಡಲು ನಿರ್ದಿಷ್ಟವಾದ ಯಾವುದೇ ಆದಾಯವಿಲ್ಲ ಎಂದರೆ ಸರಿ ಅಲ್ಲ. ನಿರ್ದಿಷ್ಟವಾಗಿ ಯಾವ ದಾವಾ ಆಸ್ತಿಯನ್ನು ಖರೀದಿ ಮಾಡಲು ನಾನು ಎಷ್ಟು ಹಣ ಕೊಟ್ಟಿದ್ದೇನೆ ಎನ್ನುವುದು ನನಗೆ ಹೇಳಲು ಬರುವುದಿಲ್ಲ. ಆದರೆ ಶಹಾಬಾದದಲ್ಲಿನ ಆಸ್ತಿಯನ್ನು ಮಾರಾಟ ಮಾಡಿ ದಾವಾ ಆಸ್ತಿಗಳನ್ನು ಖರೀದಿಸಲಾಗಿದೆ.

5 ಮತ್ತು 10ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಗಳು Matruka ಆಸ್ತಿಗಳಾಗಿಲ್ಲದೇ ಇರುವುದರಿಂದ ನನಗೆ ಮತ್ತು 2ನೇ ವಾದಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ 8ನೇ ಪ್ರತಿವಾದಿಯ ಪರ ಶ್ರೀ ಬಿ.ಜಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ